Government of Karnataka

Deposition Sheet Form No. R.P. 57

ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಲಿಂಗಸಗೂರ

ಸಿ.ಸಿ ನಂಬರ 858/2025

ಸಿ ಡಬ್ಲ್ಯೂ-10
ಪಿ ಡಬ್ಲ್ಯೂ-3

| | | |
|---|---|---|
| ಸಾಕ್ಷಿದಾರರ ಹೆಸರು | ಃ- | ರಜ್ಜಾಬಲಿ |
| ತಂದೆಯ ಹೆಸರು | ಃ- | ಮಾಬುಸಾಬ |
| ವಯಸ್ಸು | ಃ- | 42 ವರ್ಷ |
| ಉದ್ಯೋಗ | ಃ- | ಒಕ್ಕಲುತನ |
| ವಾಸಸ್ಥಳ | ಃ- | ಆನೆಹೊಸೂರ |

ದಿ.24-04-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಭೋದಿಸಲಾಯಿತು.

***ಮುಖ್ಯ ವಿಚಾರಣೆ: ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದ.***

ಚಾ.ಸಾ-1 ಮತ್ತು 9 ರವರ ಪರಿಚಯ ಇದೆ. ಸುಮಾರು 1 ವರ್ಷದ ಹಿಂದೆ ಪೋಲಿಸರು ಠಾಣೆಯಲ್ಲಿ ಒಂದು ದಾಖಲೆಗೆ ನನ್ನ ಸಹಿ ಪಡೆದಿರುತ್ತಾರೆ. ಸಾಕ್ಷಿ ಸ್ಥಳ ಪಂಚನಾಮೆಯನ್ನು ನೋಡಿ ಗುರುತಿಸಿದ್ದು ಪಂಚನಾಮೆಯನ್ನು ಅದನ್ನು ಈಗಾಗಲೇ ನಿ.ಪಿ-5 ಎಂದು ಗುರುತಿಸಲಾಗಿದ್ದು. ಸಾಕ್ಷಿಯ ಸಹಿಯನ್ನು ನಿ.ಪಿ-5(ಬಿ) ಎಂದು ಗುರುತಿಸಲಾಯಿತು. ನಮ್ಮ ಸಮಕ್ಷಮ ಘಟನಾ ಸ್ಥಳದಲ್ಲಿ ಯಾವುದೇ ಪಂಚನಾಮೆ ಮಾಡಿಲ್ಲ. ಸಾಕ್ಷಿಯು ಪೋಟೋವನ್ನು ನೋಡಿ ಗುರುತಿಸಿದ್ದು ಅದನ್ನು ಈಗ ನಿ.ಪಿ-6 ಎಂದು ಗುರುತಿಸಲಾಗಿದೆ. ಪೋಲಿಸರು ಹೇಳಿದ ಮೇರೆಗೆ ನಾನು ಪೋಟೋದಲ್ಲಿ ನಿಂತಿರುತ್ತೇನೆ ನಿ.ಪಿ-5 ರಲ್ಲಿ ಏನು ಬರೆದಿದ್ದಾರೆ ಎಂದು ನನಗೆ ಗೊತ್ತಿಲ್ಲ.

**(ಮಾನ್ಯ ಎಪಿಪಿ ಅವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿ ಕೇಳಿರುತ್ತಾರೆ. ಅನುಮತಿ ನೀಡಲಾಯಿತು.)**

**ಪಾಟೀ ಸವಾಲುಃ ಮಾನ್ಯ ಎಪಿಪಿ ಅವರಿಂದ**

ದಿನಾಂಕ 28-09-2024 ರಂದು ಪೋಲೀಸರು ನನ್ನನ್ನು ಮತ್ತು ಚಾಸಾ-9 ರವರನ್ನು ಪೋಲಿಸರು ಕರೆಯಿಸಿದ ಮೇರೆಗೆ ಚಾ.ಸಾ-5 ರವರು ತೊರಿಸಿದ ಸ್ಥಳದಲ್ಲಿ ಪೋಲಿಸರು ಸಂಜೆ 5-00 ರಿಂದ 06-10 ವರೆಗೆ ಘಟನಾ ಸ್ಥಳದಲ್ಲಿ ನಿ.ಪಿ-5 ರಂತೆ ಪಂಚನಾಮೆ ಮಾಡಿ ನಮ್ಮಗಳ ಸಹಿ ಪಡೆದಿರುತ್ತಾರೆ ಎಂದರೆ ಸರಿಯಲ್ಲ. ಸ್ಥಳದಲ್ಲಿ ನಿ.ಪಿ-6 ರಂತೆ ಪೋಟೋ ತೆಗೆಸಿರುತ್ತಾರೆ ಎಂದರೆ ಸರಿಯಲ್ಲ. ನಿ.ಪಿ-5 ರಲ್ಲಿರುವ ವಿಷಯ ಗೊತ್ತಿದ್ದರೂ ಸಹ ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ಹೆಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು ಶ್ರೀ ಬಿ.ವಿ ವಕೀಲರಿಂದಃ**

ಏನೂ ಇಲ್ಲ.

ಮರು ವಿಚಾರಣೆ ಃ

ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು)

**ಓ. ಹೇ. ಕೇ. ಸರಿ ಇದೆ**

ಸಹಿ/-

ಪ್ರಧಾನ ಸಿವಿಲ. ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ
ಲಿಂಗಸುಗೂರು.